# ನೇರಳೆಮರ

■ ಮೂಲಹಿಂದಿ: **ಕೃಷ್ಣಚಂದರ್**
■ ಕನ್ನಡಕ್ಕೆ: **ಎಚ್.ಎಂ. ಕುಮಾರಸ್ವಾಮಿ**
ಕಲೆ: ರಾಮಕೃಷ್ಣ ಸಿದ್ರಪಾಲ

ರಾತ್ರಿ ಬಿರುಗಾಳಿಯಂತಹ ರಣಗಾಳಿ ಬೀಸಿತು. ಸೆಕ್ರೆಟರಿಯೇಟ್‌ನ ಲಾನ್‌ನಲ್ಲಿದ್ದ ನೇರಳೆಮರ ಬಿದ್ದುಬಿಟ್ಟಿತು. ಬೆಳಿಗ್ಗೆ ತೋಟದ ಮಾಲಿ ಬಂದು ನೋಡುತ್ತಾನೆ: ಆ ನೇರಳೆಮರದ ಕೆಳಗೆ ಕೊಂಬೆಗಳ ಅಡಿಯಲ್ಲಿ ಒಬ್ಬ ಮನುಷ್ಯ ಸಿಕ್ಕಿಹಾಕಿಕೊಂಡುಬಿಟ್ಟಿದ್ದಾನೆ.

ಮಾಲಿ ಓಡಿಬಂದು ಜವಾನನಿಗೆ ಈ ವಿಷಯ ತಿಳಿಸಿದ. ಜವಾನ ಓಡೋಡಿ ಹೋಗಿ ಕ್ಲಾರ್ಕ್‌ಗೆ ಹೇಳಿದ. ಕ್ಲಾರ್ಕ್ ಸೂಪರಿಟೆಂಡೆಂಟ್ ಬಳಿಗೆ ಹೋಗಿ ಹೇಳಿದ. ಸೂಪರಿಟೆಂಡೆಂಟ್ ಲಾನ್ ಕಡೆಗೆ ಓಡಿಬಂದ. ಕೆಲವೇ ಕ್ಷಣಗಳಲ್ಲಿ ಆ ಮರದ ಕೆಳಗೆ ಸಿಕ್ಕಿಹಾಕಿಕೊಂಡಿದ್ದ ವ್ಯಕ್ತಿಯನ್ನು ನೋಡಲು ಮರದ ಸುತ್ತ ಜನರ ದೊಡ್ಡ ಗುಂಪು ಸೇರಿತು.

ಒಬ್ಬ ಕ್ಲಾರ್ಕ್ ಹೇಳಿದ, ‘ಪಾಪ, ಈ ನೇರಳೆಮರ ತುಂಬಾ ಹಣ್ಣು ಕೊಡುತ್ತಿತ್ತು.’ ‘ಹೌದು, ಇದರ ಹಣ್ಣುಗಳ ರುಚಿಯೇ ವಿಶಿಷ್ಟವಾಗಿತ್ತು.’ ಮತ್ತೊಬ್ಬ

